ದಿನಾಂಕ: 01.12.2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀಸವಾಲು: ಶ್ರೀ. ವಿಆರ್‌ವಿ ವಕೀಲರಿಂದ ಮೂರನೇ ಎದುರುದಾರರ ಪರವಾಗಿ.

2. ನಾನು ಓದಿರುವುದಿಲ್ಲ. ಅಪಘಾತವನ್ನು ನಾನು ನೋಡಿರುವುದಿಲ್ಲ. ಅಪಘಾತವಾದ ನಂತರ ನನ್ನ ಮಗಳನ್ನು ಬೆಂಗಳೂರಿನ ಮೆಡಿಕೇರ್ ಆಸ್ಪತ್ರೆಯಲ್ಲಿ ನೋಡಿರುತ್ತೇನೆ. ನಾವು ಆಸ್ಪತ್ರೆಗೆ ಬಂದು ನೋಡಿದಾಗ ನಮ್ಮ ಮಗಳು ಮಾತಾನಾಡುವ ಸ್ಥಿತಿಯಲ್ಲಿ ಇದ್ದಿರಲಿಲ್ಲ. ಶಶಿಕುಮಾರ್ ಈತನು ನನಗೆ ಪರಿಚಯ ಇರುವುದಿಲ್ಲ. ಅಪಘಾತಕ್ಕಿಂತ ಪೂರ್ವದಲ್ಲಿ ಮತ್ತು ನಂತರದಲ್ಲಿ ಶಶಿಕುಮಾರ್ ಇವರೊಂದಿಗೆ ನಾವು ಮಾತನಾಡಿರುವುದಿಲ್ಲ. ಅಪಘಾತವಾದ ದಿನ ನನ್ನ ಮಗಳು ಶಶಿಕುಮಾರ್ ಇವರ ಜೊತೆಯಲ್ಲಿ ಮದುವೆಗಾಗಿ ಹೊಸಕೋಟೆಗೆ ಹೋಗುತ್ತಿದ್ದರು. ನನ್ನ ಮಗಳು ಶಶಿಕುಮಾರ್ ಇವರ ಜೊತೆಯಲ್ಲಿ ಹೋಗುತ್ತಿದ್ದಳು ಎನ್ನುವುದನ್ನು ಅವಳ ಸ್ನೇಹಿತೆ ನಮಗೆ ತಿಳಿಸಿರುತ್ತಾರೆ. ಆಸ್ಪತ್ರೆಯ ದಾಖಲೆಗಳಲ್ಲಿ ದ್ವಿಚಕ್ರ ವಾಹನಕ್ಕೆ ಲಾರಿಯು ಬಂದು ಡಿಕ್ಕಿ ಹೊಡೆದಿದ್ದರಿಂದ ಅಪಘಾತವಾಗಿರುತ್ತದೆ ಎಂದು ತಿಳಿಸಲಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಅಪಘಾತವಾದ ನಂತರ ನಾನು ಶಶಿಕುಮಾರನನ್ನು ಭೇಟಿ ಮಾಡಿರುತ್ತೇನೆ ಮತ್ತು ಅಪಘಾತವು ಲಾರಿಯ ಚಾಲಕನಿಂದ ಆಗಿರುತ್ತದೆ ಎಂದು ನನಗೆ ಹೇಳಿರುತ್ತಾರೆ ಎನ್ನುವುದನ್ನು ನಾನು ಪೋಲೀಸಿನವರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

3. ನನ್ನ ಮಗಳು ಪಿಯುಸಿ ತರಗತಿಯನ್ನು ಓದುತ್ತಿದ್ದಳು ಎನ್ನುವ ಕುರಿತಂತೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅವಳು ಕೋಲಾರದಲ್ಲಿ ಪಿಯುಸಿ ಓದುತ್ತಿದ್ದಳು. ಅವಳು ಕಾಲೇಜು ಮುಗಿಸಿಕೊಂಡು ಸಂಜೆ 4.00 ಗಂಟೆ ಸುಮಾರಿಗೆ ವಾಪಸ್ಸು ಬರುತ್ತಿದ್ದಳು. ಮೋಟರ್ ಸೈಕಲ್ ಸವಾರನಿಂದ ಯಾವುದೇ ತಪ್ಪು ಆಗದಿದ್ದರೂ ಪರಿಹಾರ ಪಡೆಯಲು ಆತನು ವಿರುದ್ದ ಸುಳ್ಳು ದೂರನ್ನು ಕೊಡಲಾಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತವಾಗುವುದಕ್ಕಿಂತ ಮೊದಲು ನಮ್ಮ ಮಗಳು ಟೈಲರಿಂಗ್ ಕೆಲಸ ಮಾಡುತ್ತಿದ್ದಳು ಮತ್ತು ದಿನಕ್ಕೆ ರೂ.1,000-00 ದುಡಿಮೆ ಮಾಡುತ್ತಿದ್ದಳು ಎಂದು

ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗಳು ದುಡಿಮೆ ಮಾಡುತ್ತಿದ್ದಳು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ಗಂಡ ಏನು ಕೆಲಸ ಮಾಡುತ್ತಿಲ್ಲ. ನಾನು ಏನು ಕೆಲಸ ಮಾಡುತ್ತಿಲ್ಲ. ಸಹಜವಾಗಿ ನಮ್ಮ ಸಂಪ್ರದಾಯದಲ್ಲಿ ಹೆಣ್ಣು ಮಗಳನ್ನು ಮದುವೆ ಮಾಡಿ ಗಂಡನ ಮನೆಗೆ ಕೊಡಲಾಗುತ್ತದೆ ಎಂದರೆ ಸರಿ. ನಾವು ನಮ್ಮ ಮಗಳ ದುಡಿಮೆಯ ಆದಾಯದ ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಸಿಗಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

15ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ